ಶ್ರೀ
॥ ಶ್ರೀ ಗುರುಭ್ಯೋ ನಮಃ ॥
॥ ಹರಿಃ ಓಂ ॥

# ಶ್ರೀ ವಾದಿರಾಜರ ಹಾಡುಗಳು

Contributed by K.Harish
www.vijayadasaru.net Team Member

## ೧. ಕಂಡೆ ಕಂಡೆನು ಕೃಷ್ಣ ನಿನ್ನಯ

ರಾಗ : ಶಂಕರಾಭರಣ , ಏಕತಾಳ

ಕಂಡೆ ಕಂಡೆನು ಕೃಷ್ಣ ನಿನ್ನಯ ದಿವ್ಯ ಮಂಗಳ ಮೂರ್ತಿಯಾ ।
ಕಂಡು ಬದುಕಿದೆ ಇಂದು ನಾನು, ಕರುಣಿಸೊ ಎನ್ನೊಡಯನೇ ॥ ಪ ॥

ಉಟ್ಟದಟ್ಟಿಯು ಪಿಡಿದ ವಂಕಿಯು ತೊಟ್ಟ ಕೌಸ್ತುಭ ಭೂಷಣ ।
ಮೆಟ್ಟಿದ ನವರತ್ನದ್ಹಾವಿಗೆ ಇಟ್ಟ ಕಸ್ತೂರಿ ತಿಲಕವು ॥ ೧ ॥

ಮಂದಹಾಸವು ದಂತಪಂಕ್ತಿಯು ಚೆಲುವ ಕಡೆಗಣ್ಣ ನೋಟವು ।
ಅಂದವಾದ ಕುರುಳು ಕೂದಲು ಮುದ್ದು ಸುರಿಯುವ ಮುಖವನ ॥ ೨ ॥

ಮಲ್ಲೆಮಲ್ಲಿಗೆ ದಂಡೆ ಕೊರಳಲಿ ಚೆಲ್ವ ಕಂಕಣ ಕೈಯಲ್ಲಿ ।
ಗೊಲ್ಲಸತಿಯರ ಕೂಡಿ ಆಡುವ ಘಲ್ಲುಘಲ್ಲೆಂದು ನಲಿವನಾ ॥ ೩ ॥

ಸುರರು ಪುಷ್ಪದ ವೃಷ್ಟಿಕರೆಯಲು ಅಸುರರೆಲ್ಲರು ಓಡಲು ।
ಕ್ರೂರ ಕಾಳಿಯ ಫಣಗಳಲ್ಲಿ ಧೀರ ನಲಿನಲಿದಾಡಲು ॥ ೪ ॥

ಇನ್ನು ಎನ್ನ ಬಂಧ ತೀರಿತು ಮುನ್ನ ಕ್ಲೇಶವು ।
ಅನ್ಯರಾ ನೆರೆ ಭಜಿಸಲ್ಯಾಕೆ  ಮನ್ನಿಸೊ **ಹಯವದನನೆ** ॥ ೫ ॥

## ೨. ಧವಳಗಂಗೆಯ ಗಂಗಾಧರ

ರಾಗ : ಮೋಹನ , ಅಟತಾಳ

ಧವಳಗಂಗೆಯ ಗಂಗಾಧರ ಮಹಾಲಿಂಗ ಮಾ– ॥ ಪ ॥
ಧವನ ತೋರಿಸಯ್ಯಾ ಗುರುಕುಲೊತ್ತುಂಗ ॥ ಅ । ಪ ॥

ಅರ್ಚಿಸಿದವರಿಗಭೀಷ್ಟೆಯ ಕೊಡುವ ।
ದುಶ್ಚರಿತರನೆಲ್ಲ ದೂರದಲ್ಲಿಡುವ ॥
ಹೆಚ್ಚಿದ ಅಘಗಳ ಬೇಗನೆ ತರಿವ ನ– ।

ಮ್ಮಚ್ಯುತಗಲ್ಲದ ಅಸುರರ ಬಡಿವಾ ॥ ೧ ॥

ಮಾರನ್ನ ಗೆಲಿದ ಮನೋಹರ ಮೂರ್ತಿ ।
ಸಾರಸಜ್ಜನರಿಗೆ ಸುರಚಕ್ರವರ್ತಿ ॥
ಧಾರುಣಿಯೆಲ್ಲ ತುಂಬಿತು ನಿನ್ನಯ ಕೀರ್ತಿ ಮು- ।
ರಾರಿಯ ತೋರಿಸೊ ನಿನಗೆ ಶರಣಾರ್ತಿ ॥ ೨ ॥

ಚೆನ್ನ ಶ್ರೀಪ್ರಸನ್ನ **ಹಯವದನನ್ನ** ।
ಅನುದಿನ ನೆರೆವಂತೆ ಮಾಡೊ ನೀನೆನ್ನ ॥
ಅನ್ಯರನರಿಯೆನೊ ಗುರುವೆಂಬೆ ನಿನ್ನ ।
ಇನ್ನಾದರು ಹರಿಯ ತೋರೊ ಮುಕ್ಕಣ್ಣ ॥ ೩ ॥

## ೩. ತಾಳುವಿಕೆಗಿಂತ ತಪವು ಇಲ್ಲ

ರಾಗ: ಕಾಂಬೋದಿ , ಝಂಪೆ ತಾಳ

ತಾಳುವಿಕೆಗಿಂತ ತಪವು ಇಲ್ಲ ॥ ಪ ॥
ಕೇಳಬಲ್ಲವರಿಗೆ ಹೇಳುವೆನು ಸೊಲ್ಲ ॥ ಅ.ಪ ॥

ದುಷ್ಟ ಮನುಜರು ಪೇಳ್ವ ನಿಷ್ಟುರದ ನುಡಿ ತಾಳು ।
ಕಷ್ಟ ಬಂದರೆ ತಾಳು ಕಂಗೆಡದೆ ತಾಳು ॥
ನೆಟ್ಟ ಸಸಿ ಫಲ ಬರುವ ತನಕ ಶಾಂತಿಯ ತಾಳು ।
ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು ॥ ೧ ॥

ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು ।
ಸುಳಿನುಡಿ ಕುಹಕ ಕುಮಂತ್ರವನು ತಾಳು ॥
ಅಳುಕದಲೆ ಬಿರುಸು ಬಿಂಕದ ನುಡಿಯ ನೀ ತಾಳು ।
ಹಲಧರಾನುಜನನ್ನು ಹೃದಯದಿ ತಾಳು ॥ ೨ ॥

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು ।
ಅಕ್ಕಸವ ಮಾಡುವರ ಅಕ್ಕರದಿ ತಾಳು ॥
ಉಕ್ಕೋ ಹಾಲಿಗೆ ನೀರನಿಕ್ಕುವಂದದಿ ತಾಳು ।
ಪಕ್ಷೀಶ ಹಯವದನ ಶರಣೆನೆಂದು ಬಾಳು ॥ ೩ ॥

## ೪. ಹ್ಯಾಂಗೆ ಕೊಟ್ಟನು ಹೆಣ್ಣು ಸಾಗರನು

ರಾಗ : ಕಾಂಬೊಧಿ , ಝಂಪೆ ತಾಳ

ಹ್ಯಾಂಗೆ ಕೊಟ್ಟನು ಹೆಣ್ಣು ಸಾಗರನು ಈ ವರಗೆ ॥ ಪ ॥

ಶೃಂಗಾರಪುರುಷರು ಬಹುಮಂದಿ ಇರಲು ॥ ಅ . ಪ ॥
ಗುಷ್ಟು ಮೈಯ ಕಂಪು ನಟ್ಟಿದಾತನ ಕಣ್ಣು ।
ಮುಟ್ಟಿ ನೋಡಿದರೆ ಮೈಯತಿ ಕಠಿಣವು ॥
ಸೊಟ್ಟ ಮೋರೆಯು ಇವಗೆ ಎಷ್ಟುದ್ದ ಹಲ್ಲುಗಳು ।
ಇಷ್ಟು ಘೋರದ ಅಳಿಯ ಎಲ್ಲಿ ದೊರಕಿದನೋ ॥ ೧ ॥

ಕಾಡುವ ಭಿಕ್ಷುಕನು ಮಾಡದುದ ಮಾಡುವನು ।
ನೋಡಿದರೆ ತಲೆಯು ಜಡೆಗಟ್ಟಿಹುದು ॥
ಓಡೋಡುತಲಿ ಕಳುವ ಬೆಡಗು ನುಡಿಗಾರನಿಗೆ ।
ನೋಡಿ ನೋಡಿ ಹೆಣ್ಣು ಹೇಗೆ ಕೊಟ್ಟನೊ ಇನ್ನು ॥ ೨ ॥

ಕಂಡವರ ಕೂಡಲ್ಲ ಕಾಳಗವ ಕೊಂಡು ಭೂ- ।
ಮಂಡಲದೊಳಗೆ ಉದ್ದಂಡನಿವನು ॥
ಅಂಡಜವಾಹನಗೆ ಯೋಗ್ಯವಾದ ಹೆಣ್ಣ ।
ಕಂಡು ಕಂಡೀ ಹಯವದನರಾಯನಿಗೆ ॥ ೩ ॥

## ೫. ಏನು ಸುಕೃತವ ಮಾಡಿದಳೊ

ರಾಗ : ಧನ್ಯಾಸಿ, ಝಂಪೆತಾಳ

ಏನು ಸುಕೃತವ ಮಾಡಿದಳೊ ಯಶೋದೆ ॥ ಪ ॥
ಶ್ರೀನಿಧಿಯಾದ ಕೃಷ್ಣನ್ನ ಕರೆದೆತ್ತಿ ಮುದ್ದಿಪಳಂತೆ ॥ ಅ । ಪ ॥

ಗಂಗಾಜನಕಗೆ ಗಡಿಗೆ ನೀರನೆರೆವಳಂತೆ ।
ಮಂಗಳಾಂಗಗೆ ಭಮ ಶೃಂಗರಿಪಳಂತೆ ॥
ತುಂಗ ಭೂಧರನ ತೊಟ್ಟಿಲೊಳು ಮಲಗಿಪಳಂತೆ ।
ಕಂಗಳಿಗಗೋಚರನ ಎತ್ತಿ ಮುದ್ದಿಪಳಂತೆ ॥ ೧ ॥

ಚತುರಾಸ್ಯನ ಪಿತನ ಸುತನೆಂದೆತ್ತುವಳಂತೆ ।
ಶ್ರುತಿವಿನುತಗೆ ಜೋಹುಳವ ಪಾಡುವಳಂತೆ ॥
ಶತರವಿತೇಜಗಾರತಿಯನೆತ್ತುವಳಂತೆ ।
ಗತಭೀತನಿಗೆ ಭಾಮೆ ರಕ್ಷೆಯಿಕ್ಕುವಳಂತೆ ॥ ೨ ॥

ಜಗವನೆತ್ತಿದವನ ಮಗುವೆಂದೆತ್ತುವಳಂತೆ ।
ನಿಗಮಗೋಚರನ ಈಕ್ಷಿಸುವಳಂತೆ ॥
ಅಗಣಿತ ಸದ್ಗುಣನ ಹಗ್ಗದಿ ಕಟ್ಟುವಳಂತೆ ।
ಮಿಗೆ ನಿತ್ಯತೃಪ್ತನಿಗೆ ಪಾಲನೆರೆವಳಂತೆ ॥ ೩ ॥

ಬಹುಮುಖನಿಗೆ ಭಾಮೆ ಮುದ್ದ ನೀಡುವಳಂತೆ ।
ಅಹಿತಲ್ಪನಿಗೆ ಹಾವತುಳಿದಿಯೆಂಬುವಳಂತೆ ॥

ಬಹುದೈತ್ಯ ಸಾಂಹರಗೆ ಭಯವ ತೋರುವಳಂತೆ ।
ಮಹಿಮ ನರಸಿಂಹಗೆ ಗುಮ್ಮನ ತೋರುವಳಂತೆ ॥ ೪ ॥

ಕಡಗೋಲ ನೇಣನು ಕೈಯೊಳಗೆ ಪಿಡಿದು ಪಾ- ।
ಲ್ಗಡಲೊಡೆಯ ದ್ವಾರಕಾನಿಲಯ ॥
ಬಿಡದೆ ಸಲಹುವ **ಹಯವದನ** ಮೋಹನ ಮುದ್ದು ।
ಉಡುಪಿಯ ಕೃಷ್ಣನ್ನ ಉಡಿಯೊಳೆತ್ತುವಳಂತೆ ॥ ೫ ॥

## ೬. ಬಾರಯ್ಯ ಯದುಕುಲತಿಲಕ

ರಾಗ : ಆನಂದಭೈರವಿ, ಆದಿತಾಳ

ಬಾರಯ್ಯ ಯದುಕುಲತಿಲಕ । ತೋರಯ್ಯ ನಿನ್ನ ಮುದ್ದು ಮುಖವ ॥
ಓರಂತೆ ಮುದ್ದಿಸಿ ಯಶೋದೆ ಕು- । ಮಾರನೆ ಬಾರೆಂದಳೈ ॥ ಪ ॥

ಅಂದವಾದ ನಿನ್ನ ಮುದ್ದು ಮುಖದ । ಚಂದವನ್ನು ತಾ ನೋಡಿ ॥
ಕಂದಿ ಕುಂದಿ ಇಂದಿರೆಯು ಮರುಳಾಗಿ । ಕಂದ ನಿನ್ನ ಹೊಂದೇನೆಂದಳೈ ॥ ೧ ॥

ಕೃಷ್ಣ ನಿನ್ನ ಮಕ್ಕಳಾಟಿಕೆ । ಶಿಷ್ಟರಿಗೆ ಮೋಹವಾದುದು ।
ದುಷ್ಟಮತ ಮತಂಗಕ್ಕೆ । ಅಟ್ಟುವ ಸಿಂಹದ ಮರಿಯೆ ॥ ೨ ॥

ಇಂಥ **ಹಯವದನ**ನ । ಇಂಥ ದೇವರ ನಾ ಕಾಣೆ ॥
ಪಂಥವೇನೊ ಎನ್ನ ಕೂಡೆ ದಿನಮಣಿ । ಕಿಂಕಿಣಿಯೆ ಬಾರೆಂದಳೈ ॥ ೩ ॥

## ೭. ಶ್ರೀಶ ನೀನಹುದೊ

ರಾಗ : ಪೂರ್ವಕಲ್ಯಾಣಿ , ಆದಿತಾಳ

ಶ್ರೀಶ ನೀನಹುದೊ ಶೇಷಾಚಲ- । ವಾಸ ನೀನಹುದೊ ॥ ಪ ॥

ಶೇಷಶಯನ ಸುರೇಶವಂದಿತಾ । ಶೇಷ ಜನರನು ಪಾಲಿಸಿ ಬಡ್ಡಿ ॥
ಕಾಸು ಸೇರಿಸಿ ಗಂಟು ಕಟ್ಟುವ । ಕ್ಯಾಸಕ್ಕಿ ತಿಮ್ಮಪ್ಪ ನೀನೆ ॥ ಅ । ಪ ॥

ತಂದೆ ನೀನಹುದೊ ಕರುಣಾ- । ಸಿಂಧು ನೀನಹುದೊ ॥
ಅಂದು ದ್ರುಪದನ ನಂದನೆಯ ಎಳೆ- । ತಂದು ಘಾಸಿಯ ಮಾಡುತಿರಲು ॥
ಮುಂದೆ ಬಂದು ಅಕ್ಷಯವೆಂದು ಸಲಹಿದ । ಮಂದಹಾಸ ಮುಕುಂದನು ನೀನೆ ॥ ೧ ॥

ಧೀರ ನೀನಹುದೋ ಜಗದೋ- । ದ್ಧಾರ ನೀನಹುದೊ ॥
ಬಾರಿಬಾರಿಗೆ ನಿನ್ನ ಪಾದಸು- । ವಾರಿಜಂಗಳ ಸೇರಿದ ಭಕ್ತರ ॥
ಘೋರ ದುರಿತವ ದೂರಗೈಸುವ । ಮಾರಜನಕ ಅಪಾರ ಮಹಿಮನೆ ॥ ೨ ॥

ಧನ್ಯ ನೀನಹುದೊ ಸುರಮುನಿ- । ಮಾನ್ಯ ನೀನಹುದೊ ॥
ಪನ್ನಗಾರಿವಾಹನ ಧರೆಯೊಳು । ಇನ್ನು ನಿನಗೆದುರಾರ ಕಾಣೆ ಪ್ರ- ॥
ಸನ್ನನಾಗೆಲೊ ಬಿನ್ನಹ ಕೇಳು ಪ್ರ- । ಸನ್ನವತ್ಸಲ ಶ್ರೀ**ಹಯವದನ** ॥ ೩ ॥

## ಈ ಮುದ್ದು ಕೃಷ್ಣನ ಕ್ಷಣದ ಸುಖವೇ ಸಾಕು

ರಾಗ : ಆರಭಿ, ಝಂಪೆತಾಳ

ಈ ಮುದ್ದು ಕೃಷ್ಣನ ಕ್ಷಣದ ಸುಖವೆ ಸಾಕು ॥ ಪ ॥
ಶ್ರೀಮಧ್ವಮುನಿ ತಂದ ಉಡುಪೀಶನ ॥ಅ । ಪ ॥

ಚೆಲುವ ಚರಣದ್ವಂದ್ವ ಜಂಘೆಜಾನೂರುಕಟಿ ।
ವಳಿ ಪಂಕ್ತಿ ಜಠರ ವಕ್ಷಸ್ಕಂಬುತಂಧರದಿ ॥
ನಳಿತೋಳು ಮುದ್ದುಮುಖ ನಳಿನ ನಾಸಿಕ ಕರ್ಣ ।
ಸುಳಿಗುರುಳ ಮಸ್ತಕದ ನಳಿನನಾಭನ ಸೊಬಗು ॥ ೧ ॥

ಕಿರುಗೆಜ್ಜೆ ಕಡಿಪೆಂಡೆ ಘಂಟಾಕಟಿಸೂತ್ರ ।
ವರ ಹಾರ ಪದಕ ಶ್ರೀವತ್ಸ ಕೌಸ್ತುಭರತ್ನ ॥
ಉರು ಮುದ್ರೆ ಕಂಕಣಾಂಗದ ಕುಂಡಲ ಪ್ರಭಾ ।
ಸಿರಿನಾಮ ಮುಕುಟ ನಾಸಿಕದ ವರಮಣಿಯ ॥ ೨ ॥

ಸಕಲ ದೇವೋತ್ತಮನೆ ಸರ್ವಗುಣ ಸಂಪೂರ್ಣ ।
ಅಖಿಳಾಗಮಸ್ತುತನೆ ಅಪ್ರಾಕೃತನೆ ।
ಅಖಿಳ ಜೀವರ ಭಿನ್ನನೆನಿಪ್ಪ **ಹಯವದನ**ನ ।
ಮುಕುರ ಕಡೆಗೋಲು ನೇಣು ಸಹಿತ ಪಿಡಿದಿಹಸ್ವಾಮಿ ॥ ೩ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥